# ಸ್ವಸ್ಥ ಸಮಾಜಕ್ಕೆ ಬಾಪು ಪ್ರೇರಣೆ

ಮಹಾತ್ಮ ಗಾಂಧೀಜಿ ಅವರು ಅನುಸರಿಸಿದ ತತ್ವಗಳು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮಾರ್ಗದರ್ಶಿಯಾಗಿದ್ದು, ಇಂದಿಗೂ ಸಮಾಜದ ಬೆಳವಣಿಗೆಗೆ ನಾನಾ ರೀತಿಯಲ್ಲಿ ಪ್ರೇರಣೆ ನೀಡುತ್ತಿವೆ. ಅವರ ತತ್ವಗಳು ಮಾನವೀಯತೆ, ಸತ್ಯ ಮತ್ತು ಅಹಿಂಸೆಯ ಆಧಾರಿತವಾಗಿವೆ. ಅವು ಇಂದಿನ ಬದುಕಿಗೆ ಅತ್ಯಗತ್ಯ ಎನ್ನುವುದು ನನ್ನ ಅಭಿಪ್ರಾಯ.



ಹಿಂಸಾಚಾರ, ಭ್ರಷ್ಟಾಚಾರ ಮತ್ತು ಅಸಮಾನತೆಯೇ ತುಂಬಿ ತುಳುಕುತ್ತಿರುವ ಇಂದಿನ ಕಾಲಮಾನದಲ್ಲಿ ಬದುಕು ಎಂದರೆ ಹೇಗಿರಬೇಕು ಅನ್ನೋದಕ್ಕೆ ಗಾಂಧಿ ತತ್ವಗಳು ಮಾರ್ಗದರ್ಶಿ. ಬದುಕು ಎಂದರೆ ಇಡೀ ಸಮಾಜ. ಈ ಬದುಕಿನಲ್ಲಿ ಶಾಂತಿ ಮತ್ತು ನ್ಯಾಯಸಮ್ಮತ ಜೀವನ ನಡೆಸುವುದು ಬಹು ಮುಖ್ಯ. ಅಹಿಂಸೆಯ ತತ್ವ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಲು ಸಹಾಯಕವಾದರೆ, ಸತ್ಯನಿಷ್ಠೆ ಮತ್ತು ಪ್ರಾಮಾಣಿಕತೆ ರಾಜಕೀಯ, ಶಿಕ್ಷಣ ಹಾಗೂ ಉದ್ಯಮ ಕ್ಷೇತ್ರಗಳಲ್ಲಿ ನಂಬಿಕೆ ಮತ್ತು ವಿಶ್ವಾಸ ಬೆಳೆಸಲು ಅತ್ಯಗತ್ಯ.

ಸ್ವಾವಲಂಬನೆ ಮತ್ತು ಸ್ವದೇಶಿ ಚಿಂತನೆ ಇಂದಿನ ಆತ್ಮನಿರ್ಭರ ಭಾರತ ಅಭಿಯಾನಕ್ಕೂ ಪ್ರೇರಣೆ ನೀಡುತ್ತದೆ. ಬದುಕಿನ ಎಲ್ಲ ಹಂತಗಳಲ್ಲೂ, ಎಲ್ಲ ಸಮಯಗಳಲ್ಲೂ ಸರಳತೆ ಮತ್ತು ಮಿತವ್ಯಯ ಇಂದಿನ ಆಧುನಿಕ ಜೀವನಶೈಲಿಯಲ್ಲಿ ಸಮತೋಲನ ಕಾಯ್ದುಕೊಳ್ಳುತ್ತದೆ. ಹೀಗಾಗಿ, ಗಾಂಧಿ ತತ್ವಗಳು ಕೇವಲ ಸ್ವಾತಂತ್ರ್ಯ ಹೋರಾಟಕ್ಕೆ ಸೀಮಿತವಾಗಿರದೆ, ಹೋರಾಟದ ಆ ಕಾಲಘಟ್ಟದಿಂದ ಇಲ್ಲಿಯವರೆಗೆ ನಮ್ಮನ್ನು ಆವರಿಸಿಕೊಂಡಿವೆ. ಇಂದಿನ ಸಮಾಜವನ್ನು ಶಾಂತ, ನ್ಯಾಯಯುತ ಮತ್ತು ಮಾನವೀಯತೆಯಿಂದ ಕೂಡಿದ ದಾರಿಯಲ್ಲಿ ನಡೆಸಲು ಗಾಂಧಿವಾದವು ಅನಿವಾರ್ಯ ಹಾಗೂ ಮಾರ್ಗದರ್ಶಕ. ಅಹಿಂಸೆ ತತ್ವವು ಹಿಂಸಾಚಾರ ಮತ್ತು ಕಲಹಗಳನ್ನು ತಪ್ಪಿಸಲು ಮಾರ್ಗದರ್ಶಿ. ಸತ್ಯವನ್ನು ಪಾಲಿಸುವುದು ನೈತಿಕತೆಯ ಜೀವನ ಮತ್ತು ನಿಷ್ಠೆಯ ಬದುಕಿಗೆ ಭದ್ರ ಬುನಾದಿಯಾಗಿವೆ.



ಸರಳ ಜೀವನತತ್ವವು ಪರಿಸರ ಮತ್ತು ಮಾನಸಿಕ ಶಾಂತಿಗೆ ಸಹಾಯಕವಾದರೆ, ಧಾರ್ಮಿಕ ಸಮಭಾವ ತತ್ವವು ವಿಭಿನ್ನ ಧರ್ಮಗಳ ನಡುವೆ ಸಾಮರಸ್ಯ ಬೆಳೆಸುತ್ತದೆ. ಸ್ವಾವಲಂಬನೆ ಮತ್ತು ಸ್ವದೇಶಿ ತತ್ವಗಳು ಆರ್ಥಿಕ ಮತ್ತು ಸಾಮಾಜಿಕ ಸ್ವಾವಲಂಬನೆಯನ್ನು ಪ್ರೋತ್ಸಾಹಿಸುತ್ತವೆ. ಗ್ರಾಮಸ್ವರಾಜ್ಯ ತತ್ವವು ಗ್ರಾಮಾಭಿವೃದ್ಧಿಗೆ ಮಾರ್ಗದರ್ಶಕ. ಇಂದಿನ ಸಮಸ್ಯೆಗಳನ್ನು ಶಾಂತಿಯುತ, ನ್ಯಾಯಸಮ್ಮತ ರೀತಿಯಲ್ಲಿ ಪರಿಹರಿಸಲು ಗಾಂಧಿಯವರ ತತ್ವಗಳು ಸದಾ ಪ್ರಸ್ತುತ ಮತ್ತು ಅಗತ್ಯವಿದೆ. ಇವೆಲ್ಲವೂ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಅಡಿಪಾಯಗಳು. ಅವುಗಳನ್ನು ಎಲ್ಲರೂ ವೈಯಕ್ತಿಕವಾಗಿ ಪಾಲಿಸಬೇಕಷ್ಟೇ.

–ರಾಧ ಜಿ.ಆರ್., ಶಿಕ್ಷಕಿ

# ಎಲ್ಲರೊಳಗೊಬ್ಬ ಗಾಂಧಿ ಹುಟ್ಟಲಿ

ಗಾಂಧಿ ಎಂದೊಡನೆ ಅಹಿಂಸಾ ರೂಪದ ಹೋರಾಟ ಕಣ್ಮುಂದೆ ತೆರೆದುಕೊಳ್ಳುತ್ತದೆ. ತಪ್ಪನ್ನು ತಿದ್ದಿಕೊಂಡು ಸರಿಯಾದ ಮಾರ್ಗದಲ್ಲಿ ಸಾಗುವ ಗುಣ ನೆನಪಾಗುತ್ತದೆ. ಸತ್ಯಾಗ್ರಹದಿಂದ ಎದುರಾಳಿಯನ್ನು ಮಣಿಸಬಹುದೆಂದೂ ಅರಿವಾಗುತ್ತದೆ.

‘ಬಾಪು ಬಾಪು ಬಾಪು, ಸತ್ಯ ಹೇಳೆಂದ... ಸತ್ಯ ಹೇಳುವಾಗ ಭಯವೂ ಬೇಡೆಂದ...’ ಎಲ್ಲೋ ಕೇಳಿದ ಈ ಹಾಡಿನ ಸಾಲುಗಳು ನಮ್ಮೊಳಗೆ ಸತ್ಯ ನುಡಿಯುವ ಕಿಚ್ಚು ಹತ್ತಿಸುವಂತಿವೆ. ಈಗಿನ ವ್ಯವಸ್ಥೆಯೊಳಗೆ ಸತ್ಯ ನುಡಿಯುವಾಗ, ಪ್ರಶ್ನೆ ಮಾಡುವಾಗ ಅಡೆತಡೆಗಳು, ಬೆದರಿಕೆಗಳು ಎದುರಾಗುತ್ತವೆ. ಹೆದರಿ ಎಲ್ಲರೊಳಗೊಬ್ಬ ಆಗುವುದಕ್ಕಿಂತ ಎಲ್ಲರೊಳಗೊಬ್ಬ ಗಾಂಧಿ ಮರುಹುಟ್ಟು ಪಡೆಯಲಿ ಅನ್ನೋದು ನನ್ನ ಆಶಯ. ಈಗಿನ ಕಾಲಕ್ಕೆ ಗಾಂಧಿ ಪ್ರಸ್ತುತವಾಗಬೇಕಾದ ಬಗೆಯೂ ಹೌದು.



ನಮ್ಮ ಸುತ್ತಲಿನ ವ್ಯವಸ್ಥೆ ಗಾಂಧಿ ತತ್ವಗಳ ವಿರುದ್ಧ ದಿಕ್ಕಿನಲ್ಲಿ ಓಡುತ್ತಿದ್ದರೆ, ಆ ಓಟಕ್ಕೆ ನಾವು ಜೊತೆಯಾಗಿದ್ದೇವೆ. ಕಾಲವಿನ್ನೂ ಮಿಂಚಿಲ್ಲ. ಗಾಂಧಿ ತತ್ವಗಳ ದಿಕ್ಕಿನತ್ತ ನಾವು ನಮ್ಮ ಓಟವನ್ನು ಆದಷ್ಟು ತ್ವರಿತವಾಗಿ ಬದಲಿಸಲೇಬೇಕಿದೆ. ಇಲ್ಲವಾದಲ್ಲಿ, ಮೌಲ್ಯಯುತ ಜೀವನದಿಂದ ನಾವು ವಂಚಿತರಾಗುವುದು ನಿಶ್ಚಿತ.

ನಮ್ಮಂತಹವರಿಗೆ ಗಾಂಧೀಜಿಯವರ ಬೋಧನೆಗಳು ಮೌಲ್ಯಯುತವಾದವು. ಇಂದಿನ ಸ್ಪರ್ಧಾ ಜಗತ್ತಿನಲ್ಲಿ ಅವರ ವಿಚಾರಗಳು ಸಮತೋಲನ, ಶಾಂತಿ ಮತ್ತು ಸಾಮರಸ್ಯವನ್ನು ಪ್ರೇರೇಪಿಸುತ್ತವೆ. ಸತ್ಯ, ಪ್ರಾಮಾಣಿಕತೆ, ಪ್ರಶ್ನೆ ಮಾಡುವ ಗುಣ, ಹೋರಾಟ ನಮ್ಮಂಥವರ ಬಲವಾದ ಅಸ್ತ್ರ. ಅದನ್ನು ಬಳಸಿಕೊಂಡು ಸಮಾಜದ ಸ್ವಾಸ್ಥ್ಯಕ್ಕೆ ಅಡಿಪಾಯ ಹಾಕುವ ಕಾರ್ಯವನ್ನು ಮಾಡಬೇಕಿದೆ.

–ರುದ್ರ ಕುಮಾರ್ ಜೆ.ಎಸ್., ವಿದ್ಯಾರ್ಥಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ